ಪ್ರಜಾವಾಣಿ





# ಜೈನ್ ಕಾಲೇಜಿನಲ್ಲಿ ವಾರ್ಷಿಕೋತ್ಸವದ ಸಂಭ್ರಮ

ಇತ್ತೀಚೆಗೆ ಕನಕಪುರ ರಸ್ತೆಯಲ್ಲಿರುವ ಜೈನ್ ಕಾಲೇಜಿನಲ್ಲಿ ಸಂಭ್ರಮ ಕಳೆಕಟ್ಟಿತ್ತು. ಕಾಲೇಜು ವಾರ್ಷಿಕೋತ್ಸವದ ಅಂಗವಾಗಿ ಅಲ್ಲಿ ಕನ್ನಡ ಸಾಹಿತ್ಯ, ಸಂಗೀತದ್ದೇ ನಿನಾದ. ಕನ್ನಡ ಚಲನಚಿತ್ರಗೀತೆ, ಭಾವಗೀತೆ ಅಲ್ಲಿ ನೆರೆದಿದ್ದವರಿಗೆ ಸಂಗೀತದ ರಸದೌತಣ ಉಣಬಡಿಸಿತ್ತು.

ಕನ್ನಡತನವನ್ನು ಜಾಗೃತಗೊಳಿಸುವ ಜತೆಗೆ ಕಾಲೇಜು ಹಾಗೂ ವಿದ್ಯಾರ್ಥಿಗಳ ವಾರ್ಷಿಕ ಸಾಧನೆಗಳ ಮೇಲೆ ಬೆಳಕು ಚೆಲ್ಲಲೆಂದು ಹಮ್ಮಿಕೊಂಡಿದ್ದ ಕಾರ್ಯಕ್ರಮ ಸಾಂಸ್ಕೃತಿಕ ಸೇತುವೆಯಾಗಿ ಮೂಡಿಬಂದದ್ದು ವಿಶೇಷ.

ವೈ.ಕೆ. ಮುದ್ದುಕೃಷ್ಣ ಅವರು ಮುಖ್ಯ ಅತಿಥಿಯಾಗಿ ಆಗಮಿಸಿ, ವಿದ್ಯಾರ್ಥಿಗಳ ಸಾಧನೆಯನ್ನು ಪ್ರಶಂಸಿದರು. 'ಇಚ್ಛಾಶಕ್ತಿಯೇ ನಿಮ್ಮ ಗುರಿಕಾರ. ನಿಮ್ಮ ಸಾಧನೆಯ ಕ್ಷೇತ್ರ ಯಾವುದೇ ಆಗಿರಲಿ, ಬದುಕಿನುದ್ದಕ್ಕೂ ನಿಮ್ಮ ಹವ್ಯಾಸವನ್ನು ಜೀವಂತವಾಗಿರಿಸಿ. ನಾಡುನುಡಿಯ ಬಗ್ಗೆ ಅಭಿಮಾನವಿರಲಿ, ನಾಳಿನ ಸಾಂಸ್ಕೃತಿಕ ಸೇತುವೆ ನೀವಾಗಿ' ಎಂದು ವಿದ್ಯಾರ್ಥಿಗಳಿಗೆ ಕಿವಿಮಾತನ್ನು ಹೇಳಿದರು. ವಿದ್ಯಾರ್ಥಿಗಳು ನಡೆಸಿಕೊಟ್ಟ ಪೂಜಾಕುಣಿತ, ಜನಪದ ನೃತ್ಯ, ಭಾವಗೀತೆ ಗಾಯನ, ಸಿನಿಮಾ ಗಾಯನ ಮತ್ತು ನೃತ್ಯ ಕಾರ್ಯಕ್ರಮಗಳು ಪ್ರೇಕ್ಷಕರ ಮನಸೆಳೆದವು.

ಜೈನ್ ಕಾಲೇಜಿನ ಪ್ರಾಂಶುಪಾಲೆ ಡಾ. ಎನ್. ವತ್ಸಲಾ, ಜೈನ್ ವಿದ್ಯಾನಿಕೇತನ್ ಪ್ರಾಂಶುಪಾಲ ಬಿ. ಪಿ. ಕಿಶೋರ್ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

⌘